ಅಧ್ಯಯನಾಂಗ

**ಕನ್ನಡ ವಿಶ್ವವಿದ್ಯಾಲಯ, ಹಂಪಿ**

ವಿದ್ಯಾರಣ್ಯ ೫೮೩ ೨೭೬, ಹೊಸಪೇಟೆ ತಾಲೂಕು, ವಿಜಯನಗರ ಜಿಲ್ಲೆ.

ದೂರವಾಣಿ ಸಂಖ್ಯೆ: ೦೮೩೯೪-೨೪೧೪೬೪, www.kannadauniversity.org

ಸಂಖ್ಯೆ:ಕವಿಹಂ:ಅನಿ:ಘಟಿಕೋತ್ಸವ-೩೪:೨೦೨೫-೨೬ ದಿನಾಂಕ: ೧೩.೦೨.೨೦೨೬

# ಸುತ್ತೋಲೆ-೪

ವಿಷಯ : ನುಡಿಹಬ್ಬ ೩೪ರ ಅಂಗವಾಗಿ ನಡೆಯುವ ಘಟಿಕೋತ್ಸವ ಹಾಗೂ ಪದವಿ ಪ್ರಮಾಣ ಪತ್ರ ಶುಲ್ಕ ಪಾವತಿಯ ದಿನಾಂಕವನ್ನು ವಿಸ್ತರಿಸಿರುವ ಕುರಿತು.

ಉಲ್ಲೇಖ : ೧. ಮಾನ್ಯ ಕುಲಪತಿಗಳ ಅನುಮೋದನೆ ಕಡತ ಸಂಖ್ಯೆ: ೫೩, ಕಂಡಿಕೆ ಸಂಖ್ಯೆ: ೦೫, ದಿನಾಂಕ: ೧೯.೧೨.೨೦೨೫
೨. ಈ ಕಚೇರಿ ಸುತ್ತೋಲೆ ಸಂಖ್ಯೆ : ಕವಿಹಂ:ಅನಿ:ಘಟಿಕೋತ್ಸವ-೩೪:೨೦೨೫-೨೬/೧೯.೧೨.೨೦೨೫
೩. ಮಾನ್ಯ ಕುಲಪತಿಗಳ ಅನುಮೋದನೆ ಕಡತ ಸಂಖ್ಯೆ: ೫೩, ಕಂಡಿಕೆ ಸಂಖ್ಯೆ: ೧೪, ದಿನಾಂಕ: ೧೯.೦೧.೨೦೨೬
೪. ಮಾನ್ಯ ಕುಲಪತಿಗಳ ಅನುಮೋದನೆ ಕಡತ ಸಂಖ್ಯೆ: ೫೩, ಕಂಡಿಕೆ ಸಂಖ್ಯೆ: ೨೩, ದಿನಾಂಕ: ೦೨.೦೨.೨೦೨೬
೫. ಮಾನ್ಯ ಕುಲಪತಿಗಳ ಅನುಮೋದನೆ ಕಡತ ಸಂಖ್ಯೆ: ೫೩, ಕಂಡಿಕೆ ಸಂಖ್ಯೆ: ೩೨, ದಿನಾಂಕ: ೧೩.೦೨.೨೦೨೬

---

ಕನ್ನಡ ವಿಶ್ವವಿದ್ಯಾಲಯದ **೩೪ನೇ ನುಡಿಹಬ್ಬವು (ಘಟಿಕೋತ್ಸವ) ಫೆಬ್ರವರಿ ೨೪, ೨೦೨೬ರಂದು** ನಡೆಯಲಿದೆ. ತಾವು ಈ ಘಟಿಕೋತ್ಸವದಲ್ಲಿ ಪಿಎಚ್.ಡಿ. ಪದವಿ ಪ್ರಮಾಣಪತ್ರ ಪಡೆಯುವ ಸಂಬಂಧವಾಗಿ ಶುಲ್ಕಗಳನ್ನು ಸಂದಾಯ ಮಾಡಬೇಕಾಗಿದೆ. ಈ ಮೊತ್ತವನ್ನು ನೇರವಾಗಿ ವಿಶ್ವವಿದ್ಯಾಲಯದ ಹಣಕಾಸು ವಿಭಾಗದಲ್ಲಿ ಅಥವಾ ಡಿ.ಡಿ. ಮೂಲಕ **ಹಣಕಾಸು ಅಧಿಕಾರಿಗಳು, ಕನ್ನಡ ವಿಶ್ವವಿದ್ಯಾಲಯ,** ಹಂಪಿ ಇವರ ಹೆಸರಿಗೆ (ವಿಜಯನಗರ ಜಿಲ್ಲೆಯ ಹೊಸಪೇಟೆ ಅಥವಾ ಕಮಲಾಪುರದ ಯಾವುದೇ ರಾಷ್ಟ್ರೀಕೃತ ಬ್ಯಾಂಕಿನ ಶಾಖೆಗೆ ಜಮಾ ಆಗುವಂತೆ) ಮಾಡಿ, ಭರ್ತಿ ಮಾಡಿದ ನಿಗದಿತ ಅರ್ಜಿ ನಮೂನೆಯೊಂದಿಗೆ ಡಿ.ಡಿ.ಯನ್ನು **ನಿರ್ದೇಶಕರು, ಅಧ್ಯಯನಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ** ಈ ವಿಳಾಸಕ್ಕೆ **ದಿನಾಂಕ: ೨೦.೦೨.೨೦೨೬** ರ ಒಳಗಾಗಿ ಕಳುಹಿಸಿ ಹಾಜರಾತಿಯನ್ನು ಸ್ಥಿರೀಕರಿಸಿಕೊಳ್ಳಬೇಕೆಂದು ಸೂಚಿಸಲಾಗಿದೆ.

**ದಿನಾಂಕ: ೨೦.೦೨.೨೦೨೬ರವರೆಗೆ ಅಧಿಸೂಚನೆ ಪಡೆದಂತಹ ಹಾಗೂ ಪಡೆಯುವಂತಹ ಪಿಎಚ್.ಡಿ./ಡಿ.ಲಿಟ್. ವಿದ್ಯಾರ್ಥಿಗಳು ಮಾತ್ರ ೩೪ನೇ ಘಟಿಕೋತ್ಸವದ ಪ್ರಮಾಣ ಪತ್ರ ಪಡೆಯಲು ಅರ್ಜಿ ಸಲ್ಲಿಸತಕ್ಕದ್ದು, ದಿನಾಂಕ: ೨೧.೦೨.೨೦೨೬ರಿಂದ ಪಿಎಚ್.ಡಿ/ಡಿ.ಲಿಟ್. ಅಧಿಸೂಚನೆ ಪಡೆದ ವಿದ್ಯಾರ್ಥಿಗಳು ಅರ್ಜಿಗಳನ್ನು ಸಲ್ಲಿಸುವಂತಿಲ್ಲ.**

ಪಿಎಚ್.ಡಿ. ಹಾಗೂ ಡಿ.ಲಿಟ್. ಪದವಿ ಪಡೆಯುವ ವಿದ್ಯಾರ್ಥಿಗಳು ಘಟಿಕೋತ್ಸವದ **ದಿನದಂದು ಮಧ್ಯಾಹ್ನ ೧೨.೦೦ ಗಂಟೆಯ ಒಳಗಾಗಿ** ಅಧ್ಯಯನಾಂಗದ ಕಚೇರಿಯ ನೋಂದಣಿ ಪುಸ್ತಕದಲ್ಲಿ ಸಹಿ ಮಾಡಿ ಸಭೆಯ ಶಿಷ್ಟಾಚಾರದ ವಿವರಗಳನ್ನು ಪಡೆಯಲು ಸೂಚಿಸಿದೆ.

**ಆ ದಿನದಂದು ನಡೆಯುವ ಘಟಿಕೋತ್ಸವ ಪದವಿ ಪ್ರದಾನ ಸಮಾರಂಭದಲ್ಲಿ ಪಿಎಚ್.ಡಿ. ಹಾಗೂ ಡಿ.ಲಿಟ್. ಪದವಿ ಪಡೆಯುವ ವಿದ್ಯಾರ್ಥಿಗಳಿಗೆ ಕೊಡಮಾಡುವ ಶಲ್ಯ, ಫೈಲ್ ಶುಲ್ಕ ರೂ. ೧೫೦೦.೦೦ ಶುಲ್ಕ ಪಾವತಿಸಿ ಪಡೆದುಕೊಂಡು ಬಿಳಿ ಸಮವಸ್ತ್ರದ ಜೊತೆಗೆ ಅದನ್ನು ಧರಿಸಿ ನಿಗದಿತ ಸಮಯಕ್ಕಿಂತ ಮುಂಚಿತವಾಗಿ ತಮಗೆ ಮೀಸಲಾದ ಸ್ಥಳದಲ್ಲಿ ಆಸೀನರಾಗಿದ್ದು, ಪದವಿ ಪತ್ರವನ್ನು ಪಡೆಯಬೇಕು.**

**ಸೂಚನೆಗಳು:**

೧. ಪ.ಜಾ, ಪ.ಪಂ. ಮತ್ತು ಪ್ರವರ್ಗ-೧ರ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ ಶುಲ್ಕದಲ್ಲಿ ಶೇ.೫೦ ವಿನಾಯಿತಿ ಇರುತ್ತದೆ. (ಪಿಎಚ್.ಡಿ./ಡಿ.ಲಿಟ್. ವಿದ್ಯಾರ್ಥಿಗಳ ಶಲ್ಯ, ಫೈಲ್ ಶುಲ್ಕದಲ್ಲಿ ಯಾವುದೇ ವಿನಾಯಿತಿ ಇರುವುದಿಲ್ಲ)

೨. ಕೇಂದ್ರ/ರಾಜ್ಯ ಸರ್ಕಾರದ/ಅನುದಾನಿತ/ನಿಗಮ/ಮಂಡಳಿ/ಸಂಸ್ಥೆಗಳು ಹಾಗೂ ಇಲಾಖೆಗಳಲ್ಲಿ ಖಾಯಂ ಉದ್ಯೋಗಿಯಾದವರಿಗೆ ಶುಲ್ಕಗಳಲ್ಲಿ ಯಾವುದೇ ವಿನಾಯಿತಿ ಇರುವುದಿಲ್ಲ.

೩. ಅಂಚೆ ವಿಳಂಬ, ವಿಳಾಸಗಳ ಗೊಂದಲದಿಂದ ಡಿ.ಡಿ.ಗಳು, ಅರ್ಜಿಗಳು, ನಿಗದಿತ ಸಮಯದಲ್ಲಿ ತಲುಪದೇ ತೊಂದರೆಯಾಗುವುದನ್ನು ತಪ್ಪಿಸಲು ಖುದ್ದಾಗಿ ಬಂದು ಅರ್ಜಿ ಹಾಗೂ ಡಿ.ಡಿ. ಸಲ್ಲಿಸುವುದು ಅಪೇಕ್ಷಣೀಯ.

೪. ಪಿಎಚ್.ಡಿ. ಹಾಗೂ ಡಿ.ಲಿಟ್. ಪದವಿ ಪಡೆಯುವ ವಿದ್ಯಾರ್ಥಿಗಳಿಗೆ ಮಾತ್ರ ನುಡಿಹಬ್ಬದಂದು ವೇದಿಕೆಯಲ್ಲಿ ಘನತೆವೆತ್ತ ಮಾನ್ಯ ಕುಲಾಧಿಪತಿಗಳು ಪದವಿ ಪ್ರದಾನ ಮಾಡುವರು.

೫. ನಿಗದಿತ ಅರ್ಜಿ ನಮೂನೆಗಳಿಗಾಗಿ ವಿಶ್ವವಿದ್ಯಾಲಯದ ವೆಬ್‌ಸೈಟ್ **www.kannadauniversity.org** ಅನ್ನು ನೋಡುವುದು.

೬. ಅನಿವಾರ್ಯ ಕಾರಣಗಳಿಂದ ಬದಲಾಗಬಹುದಾದ ದಿನಾಂಕಗಳಿಗಾಗಿ ವೆಬ್‌ಸೈಟ್ **www.kannadauniversity.org** ಯಿಂದ ಮಾಹಿತಿ ಪಡೆಯಬಹುದಾಗಿದೆ.

***ವಿಶೇಷ ಸೂಚನೆ:***

***೧. ಈ ಮಾಹಿತಿಯನ್ನು ತಮ್ಮ ವಿಭಾಗದಲ್ಲಿ ಪಿಎಚ್.ಡಿ. ಅಧ್ಯಯನ ಮಾಡಿ ಪದವಿ ಪಡೆಯುವ ವಿದ್ಯಾರ್ಥಿಗಳಿಗೆ ತಿಳಿಸಲು ಕೋರಿದೆ.***

13.02.2026

ನಿರ್ದೇಶಕರು
ಅಧ್ಯಯನಾಂಗ

ಅಧ್ಯಯನಾಂಗ

**ಕನ್ನಡ ವಿಶ್ವವಿದ್ಯಾಲಯ, ಹಂಪಿ**

ವಿದ್ಯಾರಣ್ಯ ೫೮೩ ೨೭೬, ಹೊಸಪೇಟೆ ತಾಲೂಕು, ವಿಜಯನಗರ ಜಿಲ್ಲೆ.

ದೂರವಾಣಿ ಸಂಖ್ಯೆ: ೦೮೩೯೪-೨೪೧೪೬೪, www.kannadauniversity.org

ಸಂಖ್ಯೆ:ಕವಿಹಂ:ಅನಿ:ಘಟಿಕೋತ್ಸವ-೩೪:೨೦೨೫-೨೬ ದಿನಾಂಕ: ೧೩.೦೨.೨೦೨೬

## ವಿವಿಧ ಪದವಿಗಳ ಘಟಿಕೋತ್ಸವ ಪ್ರಮಾಣಪತ್ರ ಶುಲ್ಕ ವಿವರ

| ಕ್ರ.ಸಂ. | ಕೋರ್ಸ್‌ನ ಹೆಸರು | ಶುಲ್ಕ | ಒಟ್ಟು ಶುಲ್ಕ |
|---|---|---|---|
| ೦೧. | ಡಿ.ಲಿಟ್. | ಪ್ರಮಾಣಪತ್ರ ಶುಲ್ಕ -೬೦೦೦.೦೦<br>ಶಲ್ಯ, ಫೈಲ್ ಶುಲ್ಕ -೧೫೦೦.೦೦ | ೭೫೦೦.೦೦ |
| ೦೨. | ಪಿಎಚ್.ಡಿ. | ಪ್ರಮಾಣಪತ್ರ ಶುಲ್ಕ -೩೦೦೦.೦೦<br>ಶಲ್ಯ, ಫೈಲ್ ಶುಲ್ಕ -೧೫೦೦.೦೦ | ೪೫೦೦.೦೦ |
| ೦೩. | ಎಂ.ಎ.ಪಿಎಚ್.ಡಿ ಸಂಯೋಜಿತ ಪದವಿ | ಪ್ರಮಾಣಪತ್ರ ಶುಲ್ಕ | ೨೦೦೦.೦೦ |
| ೦೪. | ಎಂ.ಎ. ಕನ್ನಡ | ಪ್ರಮಾಣಪತ್ರ ಶುಲ್ಕ | ೨೦೦೦.೦೦ |
| ೦೫. | ಎಂ.ಎ. ಮಹಿಳಾ ಅಧ್ಯಯನ | ಪ್ರಮಾಣಪತ್ರ ಶುಲ್ಕ | ೨೦೦೦.೦೦ |
| ೦೬. | ಎಂ.ಎ. ಗ್ರಾಮೀಣಾಭಿವೃದ್ಧಿ | ಪ್ರಮಾಣಪತ್ರ ಶುಲ್ಕ | ೨೦೦೦.೦೦ |
| ೦೭. | ಎಂ.ಎ. ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ | ಪ್ರಮಾಣಪತ್ರ ಶುಲ್ಕ | ೨೦೦೦.೦೦ |
| ೦೮. | ಎಂ.ವಿ.ಎ. (ಚಿತ್ರಕಲೆ) | ಪ್ರಮಾಣಪತ್ರ ಶುಲ್ಕ | ೨೦೦೦.೦೦ |
| ೦೯. | ಎಂ.ಮ್ಯೂಸಿಕ್ (ಹಿಂದೂಸ್ತಾನಿ ಗಾಯನ ಮತ್ತು ಕರ್ನಾಟಕ ಸಂಗೀತ) | ಪ್ರಮಾಣಪತ್ರ ಶುಲ್ಕ | ೨೦೦೦.೦೦ |
| ೧೦. | ಎಂ.ಎಸ್ಸಿ. ಯೋಗ | ಪ್ರಮಾಣಪತ್ರ ಶುಲ್ಕ | ೨೦೦೦.೦೦ |

**ಸೂಚನೆಗಳು:**

೧. ಘಟಿಕೋತ್ಸವ ಪ್ರಮಾಣ ಪತ್ರ ಶುಲ್ಕವನ್ನು ವಿಶ್ವವಿದ್ಯಾಲಯದ ಹಣಕಾಸು ವಿಭಾಗದಲ್ಲಿ ನೇರ ಪಾವತಿ ಅಥವಾ ಡಿ.ಡಿ.ಯನ್ನು **ಹಣಕಾಸು ಅಧಿಕಾರಿಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ** ಇವರ ಹೆಸರಿನಲ್ಲಿ (ವಿಜಯನಗರ ಜಿಲ್ಲೆಯ ಹೊಸಪೇಟೆ ಅಥವಾ ಕಮಲಾಪುರದ ಯಾವುದೇ ರಾಷ್ಟ್ರೀಕೃತ ಬ್ಯಾಂಕಿನ ಶಾಖೆಗೆ ಜಮಾ ಆಗುವಂತೆ) ಪಡೆದು **ದಿನಾಂಕ: ೨೧.೦೨.೨೦೨೬ರ** ಒಳಗಾಗಿ ಸಲ್ಲಿಸುವುದು.

೨. ಪ.ಜಾ, ಪ.ಪಂ. ಮತ್ತು ಪ್ರವರ್ಗ-೧ರ ವಿದ್ಯಾರ್ಥಿಗಳಿಗೆ ಪ್ರಮಾಣಪತ್ರ ಶುಲ್ಕದಲ್ಲಿ ಶೇ.೫೦ ವಿನಾಯಿತಿ ಇರುತ್ತದೆ. (ಪಿಎಚ್.ಡಿ./ಡಿ.ಲಿಟ್. ವಿದ್ಯಾರ್ಥಿಗಳ ಶಲ್ಯ, ಫೈಲ್ ಶುಲ್ಕದಲ್ಲಿ ಯಾವುದೇ ವಿನಾಯಿತಿ ಇರುವುದಿಲ್ಲ)

೩. ಕೇಂದ್ರ/ರಾಜ್ಯ ಸರ್ಕಾರದ/ಅನುದಾನಿತ/ನಿಗಮ/ಮಂಡಳಿ/ಸಂಸ್ಥೆಗಳು ಹಾಗೂ ಇಲಾಖೆಗಳಲ್ಲಿ ಖಾಯಂ ಉದ್ಯೋಗಿಯಾದವರಿಗೆ ಶುಲ್ಕಗಳಲ್ಲಿ ಯಾವುದೇ ವಿನಾಯಿತಿ ಇರುವುದಿಲ್ಲ.

೪. ಅಂಚೆ ವಿಳಂಬ, ವಿಳಾಸಗಳ ಗೊಂದಲದಿಂದ ಡಿ.ಡಿ.ಗಳು, ಅರ್ಜಿಗಳು, ನಿಗದಿತ ಸಮಯದಲ್ಲಿ ತಲುಪದೇ ತೊಂದರೆಯಾಗುವುದನ್ನು ತಪ್ಪಿಸಲು ಖುದ್ದಾಗಿ ಬಂದು ಅರ್ಜಿ ಹಾಗೂ ಡಿ.ಡಿ. ಸಲ್ಲಿಸುವುದು ಅಪೇಕ್ಷಣೀಯ.

೫. ಮೇಲ್ಕಂಡ ಪದವಿ ಪ್ರಮಾಣಪತ್ರಗಳಲ್ಲಿ ಪಿಎಚ್.ಡಿ. ಹಾಗೂ ಡಿ.ಲಿಟ್. ಪ್ರಮಾಣ ಪತ್ರಗಳನ್ನು ನುಡಿಹಬ್ಬದಲ್ಲಿ ವಿತರಿಸಲಾಗುವುದು. ಉಳಿದ ಪದವಿಗಳ ಪ್ರಮಾಣ ಪತ್ರಗಳನ್ನು ನುಡಿಹಬ್ಬದ ನಂತರದಲ್ಲಿ ಅಧ್ಯಯನಾಂಗದಲ್ಲಿ ವಿತರಿಸಲಾಗುವುದು.

೬. ಅರ್ಜಿ ನಮೂನೆಯನ್ನು ಪಡೆಯಲು ವಿಶ್ವವಿದ್ಯಾಲಯದ ವೆಬ್‌ಸೈಟ್ **www.kannadauniversity.org** ಅನ್ನು ಸಂಪರ್ಕಿಸುವುದು.

13.02.2026

ನಿರ್ದೇಶಕರು
ಅಧ್ಯಯನಾಂಗ